# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5058/2025

ಪ್ರಾ ಸಾ 2 ಚಾ ಸಾ 2

ಹೆಸರುಃ ಚಂದ್ರಶೇಖರ

ತಂದೆಯ ಹೆಸರುಃ ಶಿವಕುಮಾರ

ವಯಸ್ಸುಃ 35 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಅಮೃತಿ ಗ್ರಾಮ .

**ದಿಃ 27.06.2026** ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ಬೋರಾಪುರ ಗ್ರಾಮ ನನ್ನ ಊರಿನಿಂದ 1-1 ವರೆ ಕಿ ಮೀ ದೂರದಲ್ಲಿ ಇದೆ . ಚಾಸಾ. 7 ನನಗೆ ಗೊತ್ತು . ಚಾಸಾ1 ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ . ಸಾಕ್ಷಿ ಸಹಿ ಗುರುತಿಸಿದ ದಾಖಲೆಯನ್ನು ನಿಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು

ಗುರುತಿಸಲಾಯಿತು. ನಾನು ಸದರಿ ಸಹಿಯನ್ನು 7-8 ತಿಂಗಳ ಹಿಂದೆ ಅಮೃತಿ ಗ್ರಾಮದ ಹೇಮಾವತಿ ಕಾಲುವೆಯ ಏರಿ ಮೇಲೆ ಪೊಲೀಸರ ಸಮಕ್ಷಮದಲ್ಲಿ ಸಹಿ ಹಾಕಿರುತ್ತೇನೆ . ಆ ಸಂದರ್ಬದಲ್ಲಿ ನಾನು , ಚಾಸಾ6 , 7 , ಪೊಲೀಸರು ಇದ್ದರು . ನಾವು ಇಷ್ಟು ಜನ ಬಿಟ್ಟು ಬೇರೆ ಯಾರು ಇರಲಿಲ್ಲ. ಪೊಲೀಸರು ಆ ಜಾಗಕ್ಕೆ ಬಂದಿರುವ ಕಾರಣ ಏನು ಎಂದು ಗೊತ್ತಿಲ್ಲ. ನಿಪಿ 4 ರಲ್ಲಿ ಏನು ಬರವಣಿಗೆ ಆಗಿತ್ತು ಎಂದರೆ ಖಾಲಿ ಪೇಪರ್ ಗೆ ಸಹಿ ಮಾಡಿರುತ್ತೇವೆ.

2.ಈಗ ನಾನು ನೋಡುತ್ತಿರುವ ಎರಡು ಪೊಟೋಗಳಲ್ಲಿ ನಾನು, ಸಾಗರ್ ಮತ್ತು ಪೊಲೀಸ್ ಇದ್ದೇವೆ. ಸಾಕ್ಷಿ ಗುರುತಿಸಿರದ 2 ಪೊಟೋಗಳನ್ನು ಒಟ್ಟಾಗಿ ನಿಪಿ 5 ಎಂದು ಗುರುತಿಸಲಾಯಿತು. ಸದರಿ ಪೊಟೋಗಳು ನಿಪಿ 4 ಕ್ಕೆ ಸಹಿ ಹಾಕುವ ಕಾಲದಲ್ಲಿ ತೆಗೆಸಿದ ಪೊಟೋಗಳು .

3. ನಾನು ಈಗ ನೋಡುತ್ತಿರುವ ಹಗ್ಗ ಕಾಲುವೆಯ ಏರಿಯ ಮೇಲೆ ಬಿದ್ದಿತ್ತು. ಪೊಲೀಸರು ಅದನ್ನು ಎತ್ತಿಕೊಂಡರು . ಸದರಿ ಹಳದಿ ಬಣ್ಣದ ಎರಡು ಹಗ್ಗದ ತುಂಡುಗಳನ್ನು

ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಸದರಿ ಹಗ್ಗದ ಬಗ್ಗೆ ಪೊಲೀಸರಾಗಲೀ ಅಲ್ಲಿ ನಿಂತಿದ್ದವರಾಗಲೀ ನಮಗೆ ಏನು ಮಾಹಿತಿ ಕೊಟ್ಟಿಲ್ಲ.

4. ನನಗೆ ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲ.ಈ ಪ್ರಕರಣದಲ್ಲಿ ಏನು ಘಟನೆಯಾಗಿದೆ ಎಂದು ನನಗೆ ಗೊತ್ತಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ದವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>

5. ನಾನು ಸಹಿ ಮಾಡಿದ ದಿಃ 7.6.2025 ಆಗಿತ್ತು ಎಂದರೆ ನನಗೆ ನೆನಪಿಲ್ಲ. ಆ ದಿನ ಬೆ. 10 ಗಂಟೆಯ ಸಮಯದಲ್ಲಿ ನಾನು ರೋಹಿತ್ , ಸಾಗರ್ ಮೂವರು ಅಮೃತ ಗ್ರಾಮದ ಬಳಿ ಬೊರಾಪುರಕ್ಕೆ ಹೋಗುವ ರಸ್ತೆಯಲ್ಲಿ ಕಾಲುವೆ ಏರಿ ಮೇಲೆ ಹೋಗುತ್ತಿದ್ದಾಗ ಪೊಲೀಸರು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಪಂಚನಾಮೆ ಮಾಡಲು ನಮ್ಮನ್ನು

ಕೋರಿದ್ದರು ಎಂದರೆ ಸರಿಯಲ್ಲ.

6. ಆ ಸಂದರ್ಬದಲ್ಲಿ ಸ್ಥಳದಲ್ಲಿ ನಾನೇ ಖುದ್ದು ಹಾಜರಿದ್ದು ಹಿಂದಿನ ದಿನ ಅಂದರೆ 6.6.2025 ರಂದು ಸಂಜೆ 4 ಗಂಟೆಯಲ್ಲಿ ಆರೋಪಿತನು ಈ ಪ್ರಕರಣದ ದೂರುದಾರಳಾದ ಚಾಸಾ1 ರವರನ್ನು ಸಾಲ ಕೇಳಿದ್ದ ವಿಚಾರದಲ್ಲಿ ನಿರ್ಜನ ಪ್ರದೇಶವಾದ ಸ್ಥಳಕ್ಕೆ ಕರೆದುಕೊಂಡು ಅವಳಿಗೆ ಕೊಲೆ ಮಾಡುವ ಉದ್ದೇಶದಿಂದ ಕಬ್ಬಿಣದ ರಾಡಿನಿಂದ ಹಲ್ಲೆ ಮಾಡಿ ಈಗ ನ್ಯಾಯಾಲಯದ ಮುಂದಿರುವ ಹಗ್ಗಗಳಿಂದ ಕೈಕಾಲುಗಳನ್ನು ಕಟ್ಟಿದ್ದು ಆ ಸಂದರ್ಭದಲ್ಲಿ ಆ ದಾರಿಯಿಂದ ಬರುತ್ತಿದ್ದ ನಾನು ಮತ್ತು ನನ್ನ ಸ್ನೇಹಿತ ಗಿರೀಶನನ್ನು ಕಂಡು ಆರೋಪಿತನು ಹಗ್ಗವನ್ನು ಅಲ್ಲೇ ಬಿಟ್ಟು ಮತ್ತು ರಾಡನ್ನು ತೆಗೆದುಕೊಂಡು ತಾನು ತಂದಿದ್ದ ಆಟೋದಲ್ಲಿ ಹೊರಟು ಹೋದ , ನಂತರ ಇದೇ ಸ್ಥಳದಲ್ಲಿ ನಾನು ಮತ್ತು ನನ್ನ ಸ್ನೇಹಿತರು ಸದರಿ ಹೆಂಗಸನ್ನು ಉಪಚರಿಸಿ ವಿಚಾರ ಮಾಡಲಾಗಿ ಆರೋಪಿತನು ಅವಳು ಸಾಲ ನೀಡಿದ್ದ ಹಣವನ್ನು ಆತನೊಂದಿಗೆ ಕೇಳಿದಾಗ ಅವಳನ್ನು ಒಂದು ಆಟೋದಲ್ಲಿ ಕರೆತಂದು ಈ ಕೃತ್ಯ

ಎಸಗಿರುವುದಾಗಿ ಅವಳು ತಿಳಿಸಿದಳು ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದೆ ಎಂದರೆ ಸರಿಯಲ್ಲ, ಘಟನೆಯ ದಿನ ಆಂಬುಲೆನ್ಸ್ ಪೋನ್ ಮಾಡಿ ಕರೆಸಿದಾಗ ಆಂಬುಲೆನ್ಸ್ ಬರಲು ತಡವಾದ ಕಾರಣ ಕುಮಾರ ಮತ್ತು ನಾನು ಆಸ್ಪತ್ರೆಗೆ ಕರೆದುಕೊಂಡು ಹೋದ ಸ್ಥಳ ಎಂದು ಪೂಲೀಸರಿಗೆ ಸ್ಥಳದ ಮಾಹಿತಿ ನೀಡಿರುವುದಾಗಿಯೂ , ಘಟನೆಗೆ ಸಂಬಂದಪಟ್ಟಂತೆ ಸ್ಥಳದಲ್ಲಿದ್ದ ಹಗ್ಗದ ತುಂಡುಗಳನ್ನು ಪೊಲೀಸರು ಜಪ್ತಿ ಪಡಿಸಿ ನಿಪಿ 4 ರಂತೆ ಸ್ಥಳದಲ್ಲಿ ಮಹಜರು ಬರೆದು ಸಹಿಗಳನ್ನು ಸ್ಥಳದಲ್ಲಿಯೇ ಪಡೆದಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಾನು ಪೊಲೀಸರಿಗೆ ಘಟನೆಯ ಸ್ಥಳ ಮತ್ತು ಹಗ್ಗವನ್ನು ತೋರಿಸುತ್ತಿದ್ದ ಬಗ್ಗೆ ನಿಪಿ 5 ರಂತೆ ಪೊಲೀಸರು ಪೊಟೋ ತೆಗೆದಿದ್ದರು ಎಂದರೆ ಪೊಟೋ ತೆಗೆದಿರುತ್ತಾರೆ ಆದರೆ ಘಟನೆ ಬಗ್ಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಬಾಗವನ್ನು ನಿಪಿ 6 ಎಂದು ಗುರುತಿಸಲಾಯಿತು.

7. ಪ್ರಕರಣದಲ್ಲಿ ವಿವರಿಸಲಾದ ಘಟನೆ, ನಿಪಿ 4 ಪಂಚನಾಮೆಗಳ ಬಗ್ಗೇ ಸಂಪೂರ್ಣ ಮಾಹಿತಿ ಇದ್ದರೂ

ಆರೋಪಿತರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಸಿ ಎಂ ಎಸ್ ವಕೀಲರಿಂದಃ</u>

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)